ಈ, ಮಾರುಕಟ್ಟೆ ಬೆಲೆಗಳನ್ನು ಆಧಾರವಾಗಿಟ್ಟುಕೊಂಡು ತಸ್ತೀಕ್ ಮಂಜೂರಿ ಮಾಡುತ್ತಿಲ್ಲ ನಿಯಮಗಳಲ್ಲಿ ನಿಗದಿಪಡಿಸಿದಂತೆ ಕೊಡಲಾಗುತ್ತಿದೆ.

ವಿಷಯ : ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳ ಚುನಾವಣೆ ಮುಂದೂಡಿದುದರಿಂದ ಆದ ಲುಕ್ಸಾನು ತುಂಬಿ ಕೊಡುವ ಕುರಿತು

ಪ್ರ. ಸಂಖ್ಯೆ 509 (1341) ಡಾ॥ ಎಂ. ಪಿ. ಕರ್ಕಿ (ಕುಮಟ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ, ಭೂ ಅಭಿವೃದ್ಧಿ ಬ್ಯಾಂಕುಗಳ ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳ ಚುನಾವಣೆಗಳು ಕೊನೆಯ ಹಂತದಲ್ಲಿ ಇರುವಾಗ ಚುನಾವಣೆಗಳನ್ನು ಮುಂದೂಡಿದ್ದೇಕೆ ;

ಆ, ಚುನಾವಣೆಗಳಿಗಾಗಿ ಈ ಹಣಕಾಸು ಸಂಸ್ಥೆಗಳು ಮಾಡಿದ ಖರ್ಚನ್ನು ಸರಕಾರದವರು ತುಂಬಿಕೊಡುವರೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ, ಭೂ ಅಭಿವೃದ್ಧಿ ಬ್ಯಾಂಕುಗಳ ಮತ್ತು ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳ ಚುನಾವಣೆಗಳನ್ನು ಈ ಕೆಳಗೆ ಕಾಣಿಸಿದ ಕಾರಣಗಳಿಂದಾಗಿ ಮುಂದೂಡಲಾಗಿದೆ.

1. ಸರಕಾರದವರು ಕೂಡ ಮಾಡಿದ ಬಡ್ಡಿಯ ಮೇಲಿನ ಸಹಾಯ ಧನದ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡು ಪ್ರಾಥಮಿಕ ಸರಕಾರ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳು ಜಿಲ್ಲಾ ಮಧ್ಯವರ್ತಿ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಚುನಾವಣೆಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯಲು ಅನುಕೂಲ ಮಾಡಿಕೊಡುವುದಕ್ಕೋಸ್ಕರ ;

2. ಸದರಿ ಸಂಘಗಳ ವಸೂಲಿ ಕಾರ್ಯಕ್ರಮಕ್ಕೆ ಚುನಾವಣೆಗಳು ಅಡ್ಡಿಯಾಗಬಾರದೆಂಬ ಉದ್ದೇಶದಿಂದ ;

ಆ, ಇಲ್ಲ.

ವಿಷಯ : ಎಲ್ಲಮ್ಮ ದೇವಸ್ಥಾನದ ಟ್ರಸ್ಟ್ ಕಮಿಟಿ

ಪ್ರ. ಸಂಖ್ಯೆ 512 (1255) ಶ್ರೀ ಎಂ. ಜಿ. ಜರತಾರಗಾರ್ (ಹುಬ್ಬಳ್ಳಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ, ಹಿಂದಿನ ಮುಖ್ಯ ಮಂತ್ರಿಗಳು ಶ್ರೀ ಯಲ್ಲಮ್ಮ ಕ್ಷೇತ್ರದ ಕಲ್ಯಾಣ ಮಂಟಪದ ಶಂಕು ಸ್ಥಾಪನೆಯ ಸಂದರ್ಭದಲ್ಲಿ ದಿನಾಂಕ 25-10-1982ರಂದು ಹಣ ಮಂಜೂರು ಮಾಡುವುದಾಗಿ ಆಶ್ವಾಸನೆ ನೀಡಿದ್ದರೆ, ಹಾಗಿದ್ದಲ್ಲಿ ಮೊತ್ತವೆಷ್ಟು ;

ಆ, ಯಲ್ಲಮ್ಮ ದೇವಸ್ಥಾನದ ಟ್ರಸ್ಟ್ ಕಮಿಟಿ ಹಾಗೂ ಪುರಸಭೆಯ ವತಿಯಿಂದ ತಲೆಗಂದಾಯ ಅಥವಾ ದರ್ಶನ ತೆರಿಗೆಯಿಂದಾಗಿ ಯಾತ್ರಿಕರಿಂದ ಕಳೆದ ಮೂರು ವರ್ಷಗಳಿಂದ ವರೆಗೆ ಬಂದ ಆದಾಯ ವೆಷ್ಟು ಹಾಗೂ ಖರ್ಚು ಮಾಡಿದ ಬಾಬ್ತುಗಳಾವುವು ಹಾಗೂ ಅದರ ಜನವರಿ 31, 1984ಕ್ಕೆ ಅಂತಿಮ ಹಣವೆಷ್ಟು ;

ಇ, ಈ ಕ್ಷೇತ್ರಕ್ಕೆ ಮೇಲ್ವಿಚಾರಣೆ ಮಾಡಲು ಶಾಸಕರನ್ನೊಳಗೊಂಡ ಸಮಿತಿ ನೇಮಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀ ಪಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ, ಹೌದು 10 ಲಕ್ಷ ರೂಪಾಯಿಗಳು.

ಆ, ಪಟ್ಟಿಯನ್ನು ಲಗತ್ತಿಸಿದೆ.

ಇ, ಇಲ್ಲ.

ವಿಷಯ ; ವಿಜಾಪುರ ಜಿಲ್ಲೆಯ ಬರಗಾಲಕ್ಕೆ ತುತ್ತಾಗಿರುವುದು

ಪ್ರ. ಸಂಖ್ಯೆ 514 (863) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ, ವಿಜಾಪುರ ಜಿಲ್ಲೆಯು ಸುಮಾರು 800 ವರ್ಷಗಳಿಂದಲೂ ಬರಗಾಲ ಪೀಡಿತ ಜಿಲ್ಲೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ, ಹಾಗಿದ್ದಲ್ಲಿ ಈ ಜಿಲ್ಲೆಯನ್ನು ಬರಗಾಲದ ಬವಣೆಯಿಂದ ತಪ್ಪಿಸಲು ಶಾಶ್ವತ ಯೋಜನೆ ಯನ್ನೇನಾದರೂ ಸರಕಾರದವರು ರೂಪಿಸಿರುವರೆ ;

ಇ, ಹಾಗಿದ್ದಲ್ಲಿ ವಿವರಗಳೇನು ?